# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 377 |
| ಸದಸ್ಯರ ಹೆಸರು | : | ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 11-12-2024 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಲೋಕೋಪಯೋಗಿ ಇಲಾಖೆಯು ತನ್ನ ವ್ಯಾಪ್ತಿಯ ರಸ್ತೆಗಳನ್ನು ನಿರ್ವಹಣೆ ಮಾಡಲು ಭಾರತೀಯ ರೋಡ್ ಕಾಂಗ್ರೆಸ್ (ಐಆರ್‌ಸಿ 82) ನಿಯಮಗಳನ್ನು ಅನುಸರಿಸುತ್ತಿದೆಯೇ; ಈ ನಿಯಮಗಳಂತೆ 2023-24ರ ಅವಧಿಯಲ್ಲಿ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಲೋಕೋಪಯೋಗಿ ವ್ಯಾಪ್ತಿಯ ರಸ್ತೆಗಳ ಜಂಗಲ್ ಕ್ಲಿಯೆರನ್ಸ್ ರಸ್ತೆ ಅಂಚು ಮತ್ತು ಚರಂಡಿಗಳ ನಿರ್ವಹಣೆ, ಬರ್ಮ ಕಟ್ಟಿಂಗ್, ಗುಂಡಿಗಳನ್ನು ಮುಚ್ಚುವ ಕಾಮಗಾರಿ ಹಾಗೂ ಅಪಾಯಕಾರಿ ಮರಗಳನ್ನು ತೆರೆವುಗೊಳಿಸುವ ಇತ್ಯಾದಿ ರಸ್ತೆ ನಿರ್ವಹಣೆ ಮಾಡಲಾಗಿದೆಯೇ; ಮಾಡಿಲ್ಲದಿದ್ದರೆ ಕಾರಣಗಳೇನು; | ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳ ನಿರ್ವಹಣೆ ಮಾಡಲು ಭಾರತೀಯ ರೋಡ್ ಕಾಂಗ್ರೆಸ್ (ಐಆರ್‌ಸಿ 82) ನಿಯಮಗಳು ಹಾಗೂ ಮಾನದಂಡಗಳನ್ನು ಅನುಸರಿಸಲಾಗುತ್ತಿದೆ.<br><br>2023-24ರ ಅವಧಿಯಲ್ಲಿ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯ ಲೋಕೋಪಯೋಗಿ ವ್ಯಾಪ್ತಿಯ ರಸ್ತೆಗಳ ಜಂಗಲ್ ಕ್ಲಿಯರೆನ್ಸ್, ರಸ್ತೆ ಅಂಚು ಮತ್ತು ಚರಂಡಿಗಳ ನಿರ್ವಹಣೆ, ಬರ್ಮ ಕಟ್ಟಿಂಗ್. ಗುಂಡಿಗಳನ್ನು ಮುಚ್ಚುವುದು ಹಾಗೂ ಇತರೆ ರಸ್ತೆ ನಿರ್ವಹಣೆ ಕಾಮಗಾರಿಯನ್ನು ಮಾಡಲಾಗಿರುತ್ತದೆ. ಲೋಕೋಪಯೋಗಿ ವ್ಯಾಪ್ತಿಯ ರಸ್ತೆಗಳಲ್ಲಿರುವ ಅಪಾಯಕಾರಿ ಮರಗಳನ್ನು ಅರಣ್ಯ ಇಲಾಖೆಯವರೊಂದಿಗೆ ಜಂಟಿಯಾಗಿ ಪರಿವೀಕ್ಷಣೆ ಮಾಡಿ ಗುರುತಿಸಿ, ಅಪಾಯಕಾರಿ ಮರಗಳನ್ನು ಗುರುತಿಸಿ ತೆರವುಗೊಳಿಸಲು ನಿಯಮಾನುಸಾರ ಕ್ರಮವಹಿಸಲಾಗುತ್ತಿದೆ. |
| ಆ) | ಲೋಕೋಪಯೋಗಿ ಇಲಾಖೆಯಲ್ಲಿ ಅನುದಾನದ ಲಭ್ಯತೆ ಆಧರಿಸಿ ತನ್ನ ವ್ಯಾಪ್ತಿಯ ರಸ್ತೆಗಳನ್ನು ಸರಿಯಾಗಿ ನಿರ್ವಹಣೆ ಮಾಡಲು ಸಾಧ್ಯವಾಗದೇ ಇರುವುದರಿಂದ ಸಂಚಾರ ದಟ್ಟಣೆ ಅನೀರಿಕ್ಷಿತ ವಾಹನ ಅಪಘಾತಗಳಾಗುವುದನ್ನು ಗಮನಿಸಿ ಅಗತ್ಯ ಕ್ರಮವಹಿಸಲು ಇಲಾಖೆ ಯಾವ ರೀತಿ ಕಾರ್ಯತಂತ್ರ ರೂಪಿಸಿದೆ; | ಕಾಲಕಾಲಕ್ಕೆ ಬಿಡುಗಡೆಯಾಗುತ್ತಿರುವ ನಿರ್ವಹಣಾ ಅನುದಾನದ ಲಭ್ಯತೆಗೆ ಅನುಗುಣವಾಗಿ ಆದ್ಯತೆಯ ಮೇರೆಗೆ ಅತ್ಯಾವಶ್ಯಕವಾಗಿ ಬೇಕಾಗಿರುವ ಅಂಶಗಳನ್ನು ಪರಿಗಣಿಸಿ ರಸ್ತೆ ನಿರ್ವಹಣೆಯನ್ನು ಕೈಗೊಂಡು ಸುರಕ್ಷಿತ ಸಂಚಾರಕ್ಕೆ ಅನುವು ಮಾಡಲಾಗುತ್ತಿದೆ. |
| ಇ) | ಕರ್ನಾಟಕದಲ್ಲಿ ಸ್ಥಳಿಯ ಭೌಗೋಳಿಕ ಭಿನ್ನತೆಯ ಹಿನ್ನೆಲೆಯಲ್ಲಿ ಲೋಕೋಪಯೋಗಿ ರಸ್ತೆಗಳ ನಿರ್ವಹಣೆಗೆ ಭಾರತೀಯ ರೋಡ್ ಕಾಂಗ್ರೆಸ್ ನಿಯಮಗಳ ಪ್ರಕಾರ ಪ್ರತಿ ಕಿಲೋ ಮೀಟರ್ ರಸ್ತೆಗೆ ನೈಜವಾಗಿ ಬೇಕಾಗಿರುವ ಅನುದಾನ ಎಷ್ಟು; ಸರಕಾರ ಆಯವ್ಯಯದಲ್ಲಿವಾರ್ಷಿಕವಾಗಿ ನಿಗದಿಪಡಿಸಿರುವ ಹಾಗೂ ಬಿಡುಗಡೆಗೊಳಿಸುವ ಅನುದಾನ ಎಷ್ಟು; | ಲೋಕೋಪಯೋಗಿ ರಸ್ತೆಗಳ ನಿರ್ವಹಣೆಗೆ ಭಾರತೀಯ ರೋಡ್ ಕಾಂಗ್ರೆಸ್ ಮಾರ್ಗಸೂಚಿ ಪ್ರಕಾರ ಪ್ರತಿ ಕಿಲೋ ಮೀಟರ್ ರಸ್ತೆಗೆ ನೈಜವಾಗಿ ಬೇಕಾಗಿರುವ ಅನುದಾನದ ಕುರಿತು ಯಾವುದೇ ಉಲ್ಲೇಖವಿರುವುದಿಲ್ಲ. ಅನುದಾನದ ಲಭ್ಯತೆಗನುಸಾರವಾಗಿ ಅವಶ್ಯಕವಾಗಿರುವ ನಿರ್ವಹಣೆ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತದೆ.<br><br>2024-25ನೇ ಸಾಲಿಗೆ ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳ ನಿರ್ವಹಣೆ ಲೆಕ್ಕಶೀರ್ಷಿಕೆ ಅಡಿಯಲ್ಲಿ ಬಿಡುಗಡೆಯಾದ ಅನುದಾನದ ವಿವರ: |

| ಕ್ರ. ಸಂ. | ವಲಯ | ಬಿಡುಗಡೆಯಾದ ಅನುದಾನ (ರೂ.ಕೋಟಿಗಳಲ್ಲಿ) | | ಪ್ರತಿ ಕಿ.ಮೀ.ಗೆ ಪರಿಗಣಿಸಲಾದ ಮೊತ್ತ (ಲಕ್ಷದಲ್ಲಿ) | |
|---|---|---|---|---|---|
| | | ರಾಜ್ಯ ಹೆದ್ದಾರಿ | ಜಿಲ್ಲಾ ಮುಖ್ಯ ರಸ್ತೆ | ರಾಜ್ಯ ಹೆದ್ದಾರಿ | ಜಿಲ್ಲಾ ಮುಖ್ಯ ರಸ್ತೆ |
| 1 | ದಕ್ಷಿಣ ವಲಯ | 44.91 | 82.04 | 1.25 | 0.70 |
| 2 | ಉತ್ತರ ವಲಯ | 89.33 | 278.30 | 1.00 | 0.75 |
| 3 | ಈಶಾನ್ಯ ವಲಯ | 48.96 | 40.11 | 1.13 | 0.48 |
| 4 | ಕೇಂದ್ರ ವಲಯ | 44.30 | 43.56 | 2.00 | 1.25 |

| | | |
|---|---|---|
| ಈ) | ಲೋಕೋಪಯೋಗಿ ರಸ್ತೆಗಳ ನಿರ್ವಹಣೆಗೆ ನೈಜವಾಗಿ ಅಗತ್ಯವಿರುವ ಮತ್ತು ಬಿಡುಗಡೆ ಮಾಡುವ ಮೊತ್ತಗಳ ವ್ಯತ್ಯಾಸವನ್ನು ಸರಿದೂಗಿಸಿ ರಸ್ತೆ ಸುಧಾರಣೆ ಮಾಡಲು ಇಲಾಖೆ ಹೇಗೆ ಕಾರ್ಯತಂತ್ರ ರೂಪಿಸುತ್ತಿದೆ? | ಇತ್ತೀಚಿನ ಸರ್ಕಾರದ ಷರತ್ತಿನಂತೆ ರೂ.2.00 ಕೋಟಿ ಮೀರಿದ ರಸ್ತೆ ನಿರ್ಮಾಣ ಕಾಮಗಾರಿಗಳಿಗೆ 2 ವರ್ಷಗಳ ಡಿ.ಎಲ್.ಪಿ. ಅವಧಿ ಹಾಗೂ 2 ರಿಂದ 5 ವರ್ಷಗಳ ಅವಧಿಗೆ ಕನಿಷ್ಠ ವಾರ್ಷಿಕ ನಿರ್ವಹಣೆಯನ್ನು ಗುತ್ತಿಗೆದಾರರಿಂದ ನಿರ್ವಹಿಸಲು ಅಂದಾಜಿನಲ್ಲಿ ಅನುವು ಮಾಡಲಾಗಿದೆ. |

ಸಂಖ್ಯೆ:ಲೋಇ 102 ಸಿಬಿಆರ್ 2024 (ಇ)

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು